**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**<u>ಫೌಜುದಾರಿ ಪ್ರಕರಣ ಸಂಖ್ಯೆ : 94/2020</u>**

**ಚಾ.ಸಾಃ 15, ಪ್ರಾ.ಸಾಃ 8**

| | |
|---|---|
| ಸಾಕ್ಷಿದಾರನ ಹೆಸರು | ಶ್ರೀಮತಿ ಸಾವಿತ್ರಿ ನಾಯ್ಕ |
| ಗಂಡನ ಹೆಸರು | ಆನಂದು ನಾಯ್ಕ |
| ವಯಸ್ಸು | 52 ವರ್ಷಗಳು |
| ಉದ್ಯೋಗ | ಆರಕ್ಷಕ ಉಪ-ನಿರೀಕ್ಷಕರು, ಕುಮಟಾ ಪೋಲೀಸ್ ಠಾಣೆ |
| ವಾಸ್ತವ್ಯ | ಕುಮಟಾ |

**<u>ಸಾಕ್ಷಿಯನ್ನು ದಿನಾಂಕಃ 18-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಎಪಿಪಿಯವರಿಂದ,</u>**

ನಾನು ಅಗಸ್ಟ-2018 ರಿಂದ ಜನವರಿ-2022 ರ ವರೆಗೆ ಹೊನ್ನಾವರ ಪೋಲೀಸ್ ಠಾಣೆಯಲ್ಲಿ ಆರಕ್ಷಕ ಉಪ-ನಿರೀಕ್ಷಕಳಾಗಿ ಕೆಲಸ ಮಾಡಿರುತ್ತೇನೆ.

ದಿನಾಂಕಃ **28**-12-2019 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಾಯಂಕಾಲ 4-00 ಕ್ಕೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮೆ ನಂ.347/2019 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದೂರನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-16 ಎಂದು, ಸಾಕ್ಷಿ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

ಅದೇ ದಿನ ಸಾಯಂಕಾಲ 05-15 ರಿಂದ 06-15 ರ ಸಮಯಲ್ಲಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾ.ಸಾ. 1 ರವರು ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಸ್ಥಳ ಪಂಚನಾಮೆಯನ್ನು ತಯಾರಿಸಿ ಸ್ಥಳದಲ್ಲಿ 3 ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-5 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋವನ್ನು ನೋಡುತ್ತಿದ್ದು ನಿಪಿ-2 ರಿಂದ 4 ಎಂದು ಗುರುತಿಸಲಾಗಿದೆ. ಅದೇ ದಿನ ಚಾ.ಸಾ. 8 ಮತ್ತು 9 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 31-07-2020 ರಂದು ಈ ಪ್ರಕರಣದ ಆರೋಪಿತರನ್ನು ಚಾ.ಸಾ. 14 ರವರು ಹೊನ್ನಾವರ ಕಡತೋಕಾ ಜಡ್ಡಿಗದ್ದೆ ಕ್ರಾಸ್ ಹತ್ತಿರ ಹಿಡಿದು ಠಾಣೆಗೆ ಕರೆದುಕೊಂಡು ಬಂದು ವಿಚಾರಣೆ ಮಾಡಿದಾಗ ಹೊನ್ನಾವರ ಠಾಣಾ ಕ್ರೈಂ ನಂ. 67/2020 ರಲ್ಲಿ ವಿಚಾರಣೆ ಮಾಡುವಾಗ ಅವರು ಈ ಪ್ರಕರಣದ ಕಳವು ಸಹ ಮಾಡಿರುವುದು ಕಂಡುಬಂದಿರುತ್ತದೆ.

ಅದರಂತೆ ಚಾ.ಸಾ. 14 ರವರು ಸದ್ರಿ ಪ್ರಕರಣದ ತನಿಖೆ ಕಾಲಕ್ಕೆ ಈ ಪ್ರಕರಣದ ಕಳವು ಮಾಲುಗಳನ್ನು ಸಹ ಅಮಾನತ್ತುಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ಪಿ ಎಫ ಸಹ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ.

ತನಿಖಾ ಕಾಲಕ್ಕೆ ಫೊಟೋ ತೆಗೆದ ಬಗ್ಗೆ ಕಲಂ 65 ಬಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತದೆ. ಅದನ್ನು ಈಗ ನೋಡುತ್ತಿದ್ದು, ನಿ.ಪಿ. 17 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 17(ಎ) ಎಂದು ಗುರುತಿಸಲಾಯಿತು.

ದಿಃ 05-08-2020 ರಂದು ಫಿರ್ಯಾದಿಯ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದ್ರಿ ಪ್ರಕರಣದ ಕಡತದ ದೃಢೀಕೃತ ನಕಲನ್ನು ಪಡೆದುಕೊಂಡು ದಿಃ 06-11-2020 ರಂದು ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ಎಂ.ಬಿ.ರಿಂದಃ**

ದೂರನ್ನು ಫಿರ್ಯಾದುದಾರರೇ ಬರೆಸಿಕೊಂಡು ಬಂದಿರುತ್ತಾರೆ. ಘಟನಾ ಸ್ಥಳಕ್ಕೆ ಅದೇ ದಿನ ಹೋಗಿರುತ್ತೇನೆ. ಹೊನ್ನಾವರ ಠಾಣೆಯಿಂದ ಚಂದಾವರಕ್ಕೆ ಸುಮಾರು 15 ಕಿ.ಮೀ. ಆಗುತ್ತದೆ. ಘಟನಾ ಸ್ಥಳಕ್ಕೆ ಹೋದಾಗ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಪಂಚರನ್ನು ಸ್ಥಳಕ್ಕೆ ಬರಮಾಡಿಕೊಂಡಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ಪಂಚರಿಗೆ ಫೋನ್ ಮಾಡಿ ಸ್ಥಳಕ್ಕೆ ಬರಮಾಡಿಕೊಂಡಿರುತ್ತೇನೆ. ಪಂಚರು ಮೊದಲೇ ಪರಿಚಯ ಇರಲಿಲ್ಲ. ಸ್ಥಳಕ್ಕೆ ಹೋದ ನಂತರ ಪಂಚರ ವಿವರವನ್ನು ಪಡೆದುಕೊಂಡಿರುತ್ತೇನೆ. ಫಿರ್ಯಾದಿಯ ಮನೆಯ ಹತ್ತಿರ ಅದೇ ದಿನ ಹೋಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**